# ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

## ವಾರ್ಡ್ ಸಂ. 189-ಹೊಂಗಸಂದ್ರ,

## ವಾರ್ಡ್ ಸಮಿತಿ ಸಭೆಯ ನಡವಳಿಗಳು

ಮಾನ್ಯ ಅಧ್ಯಕ್ಷರು/ನೋಡಲ್ ಅಧಿಕಾರಿ, ಕಾರ್ಯಪಾಲಕ ಅಭಿಯಂತರರು (ಎಸ್.ಡಬ್ಲ್ಯೂ.ಡಿ) ರವರು ಮಾನ್ಯ ಮುಖ್ಯಮಂತ್ರಿಗಳು ಕರ್ನಾಟಕ ಸರ್ಕಾರರವರು ಮಹಾದೇವಪುರ ವಲಯದ ಕಾಮಗಾರಿಗಳ ಪರಿವೀಕ್ಷಣೆ ಕಾರ್ಯಕ್ರಮ ಹಮ್ಮಿಕೊಂಡಿರುವ ಸಂಬಂಧ ಸಭೆಗೆ ಹಾಜರಾಗಿರುವುದಿಲ್ಲ ಎಂದು ತಿಳಿಸುತ್ತಾ, ಕಾರ್ಯದರ್ಶಿ/ ಸಹಾಯಕ ಅಭಿಯಂತರರು, ರವರು ದಿನಾಂಕ: 31.01.2022 ಸೋಮವಾರ ಸಂಜೆ 04.00 ಘಂಟೆಗೆ ವಾರ್ಡ್ ಸಮಿತಿ ಸಭೆಯನ್ನು ವಾರ್ಡ್ ಸಂ.189 ಹೊಂಗಸಂದ್ರ ವಾರ್ಡ್ ಕಛೇರಿ, ಬೇಗೂರು ಮುಖ್ಯ ರಸ್ತೆಯಲ್ಲಿ ಸಭೆಯನ್ನು ಏರ್ಪಡಿಸಲಾಗಿದ್ದು, ಸಭೆಯ ನಡವಳಿಗಳು ಈ ಕೆಳಕಂಡಂತಿರುತ್ತದೆ.

**ಉಪಸ್ಥಿತರು:**

**ಹಾಜರಿದ್ದ ಸಹಾಯಕ ಅಭಿಯಂತರರು/ ಕಾರ್ಯದರ್ಶಿ, ಸದ್ಯಸರುಗಳು,**
**ಹಾಜರಿದ್ದ ಅಧಿಕಾರಿಗಳು ಹಾಗೂ ಸಿಬ್ಬಂದಿ ವರ್ಗದವರು**

| ಕ್ರ.ಸಂ | ಹೆಸರು | ಹುದ್ದೆ |
|---|---|---|
| 1 | ಶ್ರೀ ಕೆ.ಎಸ್. ರಾಮೇಗೌಡ | ಕಾರ್ಯದರ್ಶಿ ಹಾಗೂ ಸಹಾಯಕ ಅಭಿಯಂತರರು ವಾರ್ಡ್ ಸಂ. 189, ಹೊಂಗಸಂದ್ರ |
| 2 | ಶ್ರೀ ಬಾಬು ರೆಡ್ಡಿ ಹೆಚ್.ಆರ್ | ಸದಸ್ಯರು |
| 3 | ಶ್ರೀ ಬಿ.ಎಸ್. ಕುಲಕರ್ಣಿ | ಸದಸ್ಯರು |
| 3 | ಶ್ರೀ ಎಂ ಮುನಿರಾಜು | ಸದಸ್ಯರು |
| 4 | ಶ್ರೀ ಎಂ ಮುನಿಯಪ್ಪ | ಸದಸ್ಯರು |
| 5 | ಶ್ರೀ ಕುಮಾರ್ | ಸಾರ್ವಜನಿಕರು |
| 6 | ಶ್ರೀ ಸಿದ್ದರಾಜು | ಸಹಾಯಕ ಸಬ್ ಇನ್ಸ್‌ಪೆಕ್ಟರ್ (ಎ.ಎಸ್.ಐ) ಬೇಗೂರು ಪೋಲಿಸ್ ಠಾಣೆ. |
| 7 | ಶ್ರೀ ಹೆಚ್. ವೆಂಕಟೇಶ್ | ಹಿರಿಯ ಆರೋಗ್ಯ ಪರಿವೀಕ್ಷಕರು, ವಾ.ಸಂ. 189 |
| 8 | ಶ್ರೀ ಸಂತೋಷ ಪ್ರಸಾದ್.ಎಮ್ | ಸಹಾಯಕ ಅಭಿಯಂತರರು,ಬಿ.ಡಬ್ಲ್ಯೂ.ಎಸ್.ಎಸ್.ಬಿ |
| 9 | ಶ್ರೀ ಸ್ವಾಮಿ ಡಿ | ಕಿರಿಯ ಅಭಿಯಂತರರು, ಬೆಸ್ಕಾಂ-ಎಸ್-19, ಬಿಳೇಕಹಳ್ಳಿ |
| 10 | ಶ್ರೀ ರಾಮಕೃಷ್ಣ ಆರ್ | ಕಂದಾಯ ನಿರೀಕ್ಷಕರು |
| 11 | ಶ್ರೀ ದೀಪಕ್ ಸವಾದಕಾರ್ | ಕಂದಾಯ ನಿರೀಕ್ಷಕರು |

ವಾರ್ಡ್ ಕಾರ್ಯದರ್ಶಿ/ಸಹಾಯಕ ಅಭಿಯಂತರರು ರವರು ಸಭೆಯಲ್ಲಿ ಹಾಜರಿದ್ದ ಎಲ್ಲಾ ಅಧಿಕಾರಿ/ನೌಕರರನ್ನು ಸದಸ್ಯರುಗಳನ್ನು ಸಭೆಗೆ ಸ್ವಾಗತಿಸುತ್ತಾ, ಹಿಂದಿನ ಸಭಾ ನಡವಳಿಯ ಪ್ರತಿ ಅಂಶದ ಬಗ್ಗೆ ಇಂದಿನ ಸಭೆಯಲ್ಲಿ ಚರ್ಚಿಸಲಾಗಿದ್ದು. ಎಲ್ಲಾ ಅಧಿಕಾರಿ/ಸಿಬ್ಬಂದಿಯವರು ಕ್ರಮ ಕೈಗೊಳ್ಳುತ್ತಿದ್ದಾರೆ ಎಂದು ಸದಸ್ಯರುಗಳು ತಿಳಿಸುತ್ತಾ, ಹಾಗೂ ವಿವಿಧ ಇಲಾಖೆಯ ಅಧಿಕಾರಿ/ಸಿಬ್ಬಂದಿ ವರ್ಗದವರು ಸಭೆಗೆ ಗೈರು ಹಾಜರಾಗಿರುವ ಬಗ್ಗೆ ಸದಸ್ಯರು ಆಕ್ಷೇಪಿಸುತ್ತಾ, ಸಭೆಯನ್ನು ಕಾರ್ಯದರ್ಶಿ/ಸಹಾಯಕ ಅಭಿಯಂತರರು ರವರು ಪ್ರಾರಂಭಿಸಿದರು.

**(ಮು.ತಿ.ನೋ)**

Scanned with

- **<u>ಕಾಮಗಾರಿ:</u>**

1. ವಾರ್ಡ್ ವ್ಯಾಪ್ತಿಯಲ್ಲಿ ಸಾರ್ವಜನಿಕರ ಮೂಲ ಭೂತಸೌಕರ್ಯದಂತಹ ಉದ್ಯಾನವನ, ಪ್ರಥಮಿಕ ಆರೋಗ್ಯ ಕೇಂದ್ರ, ಆಟದ ಮೈದಾನ ಮತ್ತು ಗ್ರಂಥಾಲಯವನ್ನು ಹೊಂಗಸಂದ್ರ ವಾರ್ಡ್‌ನಲ್ಲಿ ಇಲ್ಲದಿರುವುದರಿಂದ ಸರ್ಕಾರಿ ಜಾಗವನ್ನು ಗುರುತಿಸಿ ಹೊಸದಾಗಿ ಕೇಂದ್ರಗಳನ್ನು ಸ್ಥಾಪಿಸಲು ಎಂ ಮುನಿಯಪ್ಪ, ಎಂ ಮುನಿರಾಜು ಮತ್ತು ಇತರೆ ಸದ್ಯಸರು ಸಭೆಯಲ್ಲಿ ತಿಳಿಸಿದ್ದು, ಈ ಬಗ್ಗೆ ಸಹಾಯಕ ಅಭಿಯಂತರರು, ಬಿಬಿಎಂಪಿ ರವರು ಸಹಾಯಕ ಕಂದಾಯ ಅಧಿಕಾರಿ ಹಾಗೂ ಸದ್ಯಸರ ರವರುಗಳು ಸರ್ಕಾರಿ ಜಾಗಗಳನ್ನು ಗುರುತಿಸಿ ನೀಡಲು ಸಹಕರಿಸಲು ಸಭೆಯಲ್ಲಿ ತಿಳಿಸಿದರು.
2. ಮಾನ್ಯ ಉಚ್ಚ ನ್ಯಾಯಾಲಯದ ಆದೇಶದಂತೆ ಆರ್ಟೀರಿಯಲ್ ಮತ್ತು ಸಬ್- ಆರ್ಟೀರಿಯಲ್ ರಸ್ತೆಗಳಲ್ಲಿ ರಸ್ತೆಗುಂಡಿಗಳನ್ನು ಮುಚ್ಚಲು ಸೂಚಿಸಿದ್ದು, ಅದರಂತೆ ಹೊಂಗಸಂದ್ರ ವಾರ್ಡ್‌ನಲ್ಲಿ ರಸ್ತೆಗುಂಡಿಗಳನ್ನು ಮುಚ್ಚಲು ಕ್ರಮವಹಿಸಿರುವ ಬಗ್ಗೆ ಎಲ್ಲಾ ಸದ್ಯಸರು ಸಭೆಯಲ್ಲಿ ಪ್ರಸ್ತಾಪಿಸಿದ್ದು, ಈ ಬಗ್ಗೆ ಸಹಾಯಕ ಅಭಿಯಂತರರು ರವರು ಎಲ್ಲಾ ರಸ್ತೆಗಳಲ್ಲಿನ ರಸ್ತೆ ಗುಂಡಿಗಳನ್ನು ಮುಚ್ಚಲು ಕ್ರಮವಹಿಸಲಾಗುತ್ತಿದ್ದು ಹಾಗೂ ಪ್ರತಿದಿನ ಮುಚ್ಚಿರುವ ರಸ್ತೆಗುಂಡಿಗಳ ವಿವರಗಳನ್ನು ನಿಗಧಿತ ನಮೂನೆಯಲ್ಲಿ ಭರ್ತಿ ಮಾಡಿ ಮಾನ್ಯ ಮುಖ್ಯ ಆಯುಕ್ತರವರಿಗೆ ವರದಿಯನ್ನು ನೀಡಲಾಗುತ್ತಿರುವುದಾಗಿ ಸಭೆಯಲ್ಲಿ ತಿಳಿಸಿದರು.
3. ವಾರ್ಡ್ ವ್ಯಾಪ್ತಿಯ ಪ್ರದೇಶಗಳಿಗೆ ಹೊಸದಾಗಿ ಟಾರ್ ಹಾಕಲು, ಚರಂಡಿಗಳನ್ನು ನಿರ್ಮಿಸಲು, ಕಲ್ವರ್ಟ್‌ಗಳನ್ನು ಅಳವಡಿಸಲು, ಚರಂಡಿಗಳಲ್ಲಿ ಹೂಳೆತ್ತಲು ಸಭೆಯಲ್ಲಿ ಸದ್ಯಸರು ತಿಳಿಸಿದ್ದು. ವಾರ್ಡ್ ಸಹಾಯಕ ಅಭಿಯಂತರರು ರವರು ಸರ್ಕಾರದ ಅಮೃತ ನಗರೋತ್ಥಾನ ಅನುದಾನ ಮತ್ತು ಪಾಲಿಕೆ ಅನುದಾನ ಬಿಡುಗಡೆಯಾದ ನಂತರ ಕ್ರಮ ವಹಿಸಲಾಗುವುದೆಂದು ಸಭೆಗೆ ತಿಳಿಸಿದರು.

**<u>ಬಿ.ಡಬ್ಲ್ಯೂ.ಎಸ್.ಎಸ್.ಬಿ. –</u>**

1. ಹಿಂದಿನ ಸಭೆಯ ದಿನಾಂಕ: 13.01.2022 ರಂದು ಚರ್ಚಿಸಿರುವ ವಿಷಯದ ಬಗ್ಗೆ, ಇಂದಿನ ಸಭೆಯಲ್ಲಿ ವಾರ್ಡ್ ವ್ಯಾಪ್ತಿಯಲ್ಲಿ ಮ್ಯಾನ್ ಹೋಲ್‌ಗಳು ರಸ್ತೆಗಳಿಂತ ಕೆಳ ಪ್ರದೇಶದಲ್ಲಿದ್ದು, ರಸ್ತೆಯ ಮಟ್ಟಕ್ಕೆ ಎತ್ತರಿಸುವಂತೆ ಸದ್ಯಸರು ಸಭೆಗೆ ತಿಳಿಸಿದ್ದು. ಈ ಬಗ್ಗೆ ಸಭೆಯಲ್ಲಿ ಹಾಜರಿದ್ದ ಶ್ರೀ ಸಂತೋಷ ಪ್ರಸಾದ ಸಹಾಯಕ ಅಭಿಯಂತರರು, ಬಿಡಬ್ಲೂಎಸ್‌ಎಸ್‌ಬಿ ರವರು ಸ್ಥಳ ಪರಿಶೀಲಿಸಲಾಗಿದ್ದು ಕ್ರಮವಹಿಸಲಾಗುತ್ತಿದೆ ಎಂದು ಸಭೆಗೆ ತಿಳಿಸಿದರು.
2. ವಾರ್ಡ್ ವ್ಯಾಪ್ತಿಯಲ್ಲಿ ಬೇಗೂರು ಮುಖ್ಯ ರಸ್ತೆಯಲ್ಲಿ ಒಳಚರಂಡಿ ಪೈಪ್ ಅಳವಡಿಸುವ ಕಾಮಗಾರಿ ಪೂರ್ಣಗೊಂಡಿದ್ದು ಟಾರ್ ಹಾಕುತ್ತಿರುವುದಾಗಿ ಶ್ರೀ ಸಂತೋಷ ಪ್ರಸಾದ ಸಹಾಯಕ ಅಭಿಯಂತರರು, ಬಿಡಬ್ಲೂಎಸ್‌ಎಸ್‌ಬಿ ಸಭೆಗೆ ತಿಳಿಸಿದರು.

ಮೇಲಿನ ಎಲ್ಲಾ ವಿಷಯಗಳಿಗೆ ಸಂಬಂಧಪಟ್ಟಂತೆ ಕೂಲಂಕುಷವಾಗಿ ಚರ್ಚಿಸಿ, ಸದರಿ ವಿಷಯಗಳ ಬಗ್ಗೆ ಕ್ರಮ ಕೈಗೊಳ್ಳುವಂತೆ ಸಭೆಯಲ್ಲಿದ್ದ ಎಲ್ಲಾ ಅಧಿಕಾರಿಗಳಿಗೆ ಸೂಚಿಸಿ, ಸಭೆಯಲ್ಲಿ ಮಾನ್ಯ ಅಧ್ಯಕ್ಷರು/ನೋಡಲ್ ಅಧಿಕಾರಿಗಳ ಅನುಪಸ್ಥಿಯಲ್ಲಿ ಕಾರ್ಯದರ್ಶಿಗಳು/ಸಹಾಯಕ ಅಭಿಯಂತರರು ರವರು ವಾರ್ಡ್ ಸಮಿತಿ ಸಭೆಯನ್ನು ವಂದಾನಾರ್ಪಣೆಯೊಂದಿಗೆ ಮುಕ್ತಾಯಗೊಳಿಸಲಾಯಿತು.

ಕಾರ್ಯದರ್ಶಿ ವಾರ್ಡ್ ಸಂಖ್ಯೆ: 189ರ
ಸಹಾಯಕ ಅಭಿಯಂತರರು,
ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

Scanned with